**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**<u>ದಿನಾಂಕಃ-27.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ</u>**
**<u>ಶ್ರೀ .ಕೆ.ಎಂ.ಎಸ್.ವಕೀಲರಿಂದಃ</u>**

ದಾವಾ ಆಸ್ತಿಯಲ್ಲಿ ಒಟ್ಟು 5 ಆಸ್ತಿಗಳು ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಗಳು ವಾದಿಯರ ತಂದೆಯಾದ ಕದ್ರಯ್ಯನವರಿಗೆ ವಿಭಾಗದಲ್ಲಿ ಬಂದ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಕದ್ರಯ್ಯನವರ ಹಿಸ್ಸೆಗೆ ಬಂದ ನಂತರ ಅವರು ಸಾಯುವರರೆಗೂ ಅವರೇ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮೂಲತಃ ಕದ್ರಯ್ಯ ಮತ್ತು ನರಸಯ್ಯನವರಿಗೆ ಸೇರಿದ್ದವುಗಳಾಗಿರುತ್ತವೆ. ದಾವಾಸ್ವತ್ತುಗಳನ್ನು ಬಿಟ್ಟು ಬೇರೆ ಸ್ವತ್ತುಗಳು ನರಸಯ್ಯನಿಗೆ ಸಂಬಂದಪಟ್ಟ ಆಸ್ತಿಗಳು ಬೇರೆ ಇರುತ್ತವೆ ಎಂದರೆ ಸರಿ. ಕದ್ರಯ್ಯನವರಿಗೆ 5 ಜನಹೆಣ್ಣು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಅವರುಗಳೆಂದರೆ 1 ರಿಂದ 4 ನೇ ವಾದಿಯರು ಮತ್ತು 1 ನೇಪ್ರತಿವಾದಿಯರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಪೈಕಿ ನನ್ನ ತಂದೆಯವರು ಎರಡು ಆಸ್ತಿಗಳನ್ನು ಖರೀದಿಸಿರುತ್ತಾರೆ ಅವುಗಳೆಂದರೆ ಸ.ನಂ 16/2 ರಲ್ಲಿ 1 ಎಕರೆ ಮತ್ತು ಪುನಃ ಅದೇ ಸ.ನಂ ನಲ್ಲಿ 20 ಗುಂಟೆಯನ್ನು ಕದ್ರಯ್ಯ ಮತ್ತು ನರಸಯ್ಯನವರಿಂದ ಖರೀದಿಸಿರುತ್ತಾರೆ. ಕದ್ರಯ್ಯ ನವರು ಆಗ ಗೋಪಾಲಪುರದಲ್ಲಿ ವಾಸವಿದ್ದರು. ಆ ಸಮಯದಲ್ಲಿ ಕದ್ರಯ್ಯ ನವರು ಅವರ ಮೊದಲನೇ ಮಗಳಾದ 1ನೇ ವಾದಿ ಪುಟ್ಟಮ್ಮನೊಂದಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಕದ್ರಯ್ಯ ನವರು ಮಗಳೊಂದಿಗೆ ಬೆಂಗಳೂರಿನಲ್ಲಿ ವಾಸವಿದ್ದುದ್ದರಿಂದ ಕದ್ರಯ್ಯ ನವರ ಮಕ್ಕಳೇ ದಾವಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಈಗಲೂ ಸಹ ಕದ್ರಯ್ಯ ನ ಮಕ್ಕಳುಗಳೇ ದಾವಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**